# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **111** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯದಲ್ಲಿ ಎಚ್.ಟಿ. ಲೈನ್‌ಗಳಿಗಾಗಿ ಕೃಷಿ ಹಾಗೂ ಕೃಷಿಯೇತರ ಜಾಗವನ್ನು ಸ್ವಾಧೀನಪಡಿಸುವ ನಿಯಮಗಳು ಯಾವುವು; ಅವುಗಳನ್ನು ಪೂರ್ಣವಾಗಿ ಪಾಲಿಸಲಾಗುತ್ತಿದೆಯೇ; (ವಿವರ ನೀಡುವುದು)</td><td>ಕರ್ನಾಟಕ ರಾಜ್ಯದಲ್ಲಿ ಹೆಚ್.ಟಿ ಲೈನ್ ರಚನೆ/ ವಿಸ್ತರಣಾ ಕಾಮಗಾರಿಗಳಿಗೆ ಯಾವುದೇ ಜಮೀನುಗಳನ್ನು ಸ್ವಾಧಿನಪಡಿಸಲಾಗುವುದಿಲ್ಲ.</td></tr>
<tr><td>ಆ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಎಷ್ಟು ಲೈನ್ ವಿಸ್ತರಣ ಕಾಮಗಾರಿ ಜಾರಿಯಲ್ಲಿವೆ; ಅವುಗಳಿಗಾಗಿ ಸ್ವಾಧೀನಪಡಿಸಿದ ಜಮೀನು ಎಷ್ಟು; ಸದರಿ ಜಮೀನುಗಳಿಗೆ ಪರಿಹಾರ ನೀಡಲಾಗಿದೆಯೇ; ನೀಡಿಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು; (ವಿವರ ನೀಡುವುದು)</td><td>➢ <u>ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:</u><br>ಮೆಸ್ಕಾಂ ವತಿಯಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ –ಪ್ರಸ್ತುತ ಪ್ರಗತಿಯಲ್ಲಿರುವ ಲೈನ್ ವಿಸ್ತರಣಾ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ:-<br>
<table>
<tr><th>ಜಿಲ್ಲೆ</th><th>ಪ್ರಗತಿಯಲ್ಲಿರುವ ಲೈನ್ ವಿಸ್ತರಣಾ ಕಾಮಗಾರಿಗಳ ಸಂಖ್ಯೆ</th></tr>
<tr><td>ಧಕ್ಷಿಣ ಕನ್ನಡ</td><td>187</td></tr>
<tr><td>ಉಡುಪಿ</td><td>86</td></tr>
<tr><td>ಒಟ್ಟು</td><td>273</td></tr>
</table>
ಮೆಸ್ಕಾಂ ವತಿಯಿಂದ ರಚಿಸಲಾಗುವ 11ಕೆವಿ ಮತ್ತು 33ಕೆವಿ ವಿತರಣಾ ಮಾರ್ಗಗಳಿಗೆ ಭೂಸ್ವಾಧೀನ ಮಾಡಲಾಗುತ್ತಿಲ್ಲ.<br><br>11 ಕೆವಿ ಮತ್ತು 33 ಕೆವಿ ಹೆಚ್.ಟಿ. ಮಾರ್ಗಗಳನ್ನು ರಸ್ತೆಗಳ ಪಕ್ಕದಲ್ಲಿರುವ ಯೂಟಿಲಿಟಿ ಕಾರಿಡಾರ್ ನಲ್ಲಿ ನಿರ್ಮಿಸಲಾಗುತ್ತಿದ್ದು, ಖಾಸಗಿ ಜಮೀನಿನಲ್ಲಿ ಮಾರ್ಗಗಳು ಹಾದು ಹೋಗುವ ಸಂದರ್ಭದಲ್ಲಿ ತೋಟಗಾರಿಕಾ/ಕೃಷಿ ಬೆಳೆಗಳಿಗೆ ಹಾನಿಯಾಗುವ ಸಂದರ್ಭದಲ್ಲಿ ಸಂಬಂಧಪಟ್ಟವರ ಕೋರಿಕೆಯ ಮೇರೆಗೆ ಸರ್ಕಾರದ ಮಾನದಂಡದಂತೆ ಬೆಳೆ ಪರಿಹಾರವನ್ನು ಮಾತ್ರ ನೀಡಲಾಗುತ್ತಿದ್ದು, ಜಮೀನು ಸ್ವಾಧೀನ ಪಡಿಸಲು ಅವಕಾಶವಿರುವುದಿಲ್ಲ. ಆದುದರಿಂದ ಜಮೀನು ಪರಿಹಾರದ ಸಂದರ್ಭಗಳು ಉದ್ಭವಿಸುವುದಿಲ್ಲ.</td></tr>
</table>

| | | | |
|---|---|---|---|
| | | | ➢ **<u>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ:</u>**<br>ಕ.ವಿ.ಪ್ರ.ನಿ.ನಿ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸರಣ ಮಾರ್ಗ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ:-<br><br>1. **<u>ದಕ್ಷಿಣ ಕನ್ನಡ ಜಿಲ್ಲೆ :</u>**<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ 04 ಪ್ರಸರಣ ಮಾರ್ಗ ಕಾಮಗಾರಿಗಳು ಪ್ರಗತಿಯಲ್ಲಿವೆ:<br><br>• ಕಡಂದಲೆ 400ಕೆವಿ ಪ್ರಸರಣ ಮಾರ್ಗ<br>• ಕೇಮಾರ್-ಬಜ್ಪೆಯಿಂದ ಕಡಂದಲೆಗೆ 220ಕೆವಿ ಪ್ರಸರಣ ಮಾರ್ಗ,<br>• ಕೇಮಾರ್-ಕಾವೂರ್ ನಿಂದ ಕಡಂದಲೆಗೆ 220ಕೆವಿ ಪ್ರಸರಣ ಮಾರ್ಗ,<br>• ಸುಳ್ಯ 110 ಕೆವಿ ಪ್ರಸರಣ ಮಾರ್ಗ.<br><br>2. **<u>ಉಡುಪಿ ಜಿಲ್ಲೆ:</u>**<br>ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ 02 ಪ್ರಸರಣ ಮಾರ್ಗ ಕಾಮಗಾರಿಗಳು ಪ್ರಗತಿಯಲ್ಲಿವೆ::<br>• 110ಕೆವಿ ಹೆಗ್ಗುಂಜೆ-ಬ್ರಹ್ಮಾವರ ಪ್ರಸರಣ ಮಾರ್ಗ<br>• 110ಕೆವಿ ಹೆಗ್ಗುಂಜೆ-ಕುಂದಾಪುರ ಪ್ರಸರಣ ಮಾರ್ಗ.<br><br>ಕವಿಪ್ರನಿನಿಯು ಮೇಲಿನ ಪ್ರಸರಣ ಮಾರ್ಗ ನಿರ್ಮಾಣಕ್ಕೆ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.<br><br>ವಿದ್ಯುತ್ ಪ್ರಸರಣ ಮಾರ್ಗಗಳನ್ನು ನಿರ್ಮಾಣ ಮಾಡುವಾಗ ಮಾರ್ಗ ಮಧ್ಯದಲ್ಲಿರುವ ಭೂ ಪ್ರದೇಶದ ಮಾಲೀಕರಿಗೆ ರಹದಾರಿ ಪರಿಹಾರವನ್ನು ನಿಯಮಾನುಸಾರ ನೀಡಲಾಗುತ್ತಿದೆ. |

| | | |
|---|---|---|
| ಇ) | ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಕಲ್ಲಮುಂಡ್ಕೂರು ಗ್ರಾಮಗಳ ಪ್ರದೇಶದಲ್ಲಿ ಎಚ್.ಟಿ. ಲೈನ್‌ಗಳಿಗಾಗಿ ಕೃಷಿ ಹಾಗೂ ಕೃಷಿಯೇತರ ಜಾಗವನ್ನು ಸ್ವಾಧೀನ ಮಾಡುತ್ತಿದ್ದು, ಪರಿಹಾರ ನೀಡಲಾಗಿದೆಯೇ?<br>ಇಲ್ಲದಿದ್ದಲ್ಲಿ ಕಾರಣಗಳೇನು? | ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಕಲ್ಲಮುಂಡ್ಕೂರು ಗ್ರಾಮಗಳ ಪ್ರದೇಶದಲ್ಲಿ ಕವಿಪ್ರನಿನಿ ವತಿಯಿಂದ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಮಾಡುತ್ತಿರುವುದಿಲ್ಲ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.: |
| ಈ) | ಮಾಹಿತಿ ನೀಡದೆ ಮತ್ತು ಅಗತ್ಯ ಪರಿಹಾರವನ್ನು ನೀಡದೆ ಲೈನ್ ವಿಸ್ತರಣ ಕಾಮಗಾರಿ ಪ್ರಾರಂಭ ಮಾಡಿರುವ ಬಗ್ಗೆ ಎಷ್ಟು ದೂರುಗಳು ಸರಕಾರಕ್ಕೆ ಸಲ್ಲಿಕೆಯಾಗಿವೆ? ಈ ಕುರಿತು ಯಾವಾಗ ಕ್ರಮವಹಿಸಲಾಗುತ್ತದೆ? | |
| ಉ) | ಪರಿಹಾರ ನೀಡದೆ ಮತ್ತು ಅಗತ್ಯ ಕ್ರಮಗಳನ್ನು ವಹಿಸದೇ ಎಚ್.ಟಿ.ಲೈನ್ ಕಾಮಗಾರಿಗಳನ್ನು ಮಾಡಲು ಕಾರಣವೇನು; ಈ ಕುರಿತಂತೆ ಸಾರ್ವಜನಿಕರ ಹಾಗೂ ಸಂತ್ರಸ್ತರ ದೂರುಗಳನ್ನು ಪರಿಶೀಲಿಸಿ ಯೋಜನೆಯ ಪ್ರಸ್ತುತತೆ ಕುರಿತಂತೆ ಮನವಿಕೆ ಮಾಡಲಾಗುತ್ತಿದೆಯೇ ಮತ್ತು ಅಗತ್ಯ ಪರಿಹಾರ ನೀಡುವ ಬಗ್ಗೆ ಹೇಗೆ ಖಾತರಿಪಡಿಸಿಕೊಳ್ಳಲಾಗುತ್ತಿದೆ? (ವಿವರ ನೀಡುವುದು) | |

ಸಂಖ್ಯೆ: ಎನರ್ಜಿ 164 ಇಬಿಎಸ್ 2025

(ಕೆ.ಜೆ.ಜಾರ್ಜ್)<br>ಇಂಧನ ಸಚಿವರು

12/8/25